"ಗೋರೀ ಅಂದ್ರೆ ತಮಾಷೆ ಅಂದ್ಕೊಂಡಿದೀಯಾ ಮಗಾ ನೀನು? ಅದೇನೂ ಖಾಲೀ ಇರಾಕಿಲ್ಲಾ. ಸತ್ತೋದವ್ರ್ ಆತ್ಮ ಅದರಾಗೇ ಇರ್ತದೆ. ಅದು ಅವರ ಮನೆ ಇದ್ದಾಂಗೇಯಾ. ಸತ್ತೋದೋರು ಸ್ವರ್ಗಕ್ಕಾನಾ ಹೋಗ್ಲೀ, ನರಕಕ್ಕಾನಾ ಹೋಗ್ಲಿ, ಅವರ ತಲೆ ಅಷ್ಟೇಯಾ ಹೋಗೋದು. ಕಾಲು ಇಲ್ಲೇ ಗೋರಿ ಒಳ್ಗೇ ಇರ್ತವೆ. ನಾವು ಗೋರೀನಾ ಯಾಕೆ ಪೂಜೆ ಮಾಡೋದು ಅಂದ್ಕಂಡಿದೀಯಾ? ನರಕ್ದಾಗೆ ಅವರ ತಲೆ ಇದ್ರೆ ನಾವ್ ಇಲ್ಲಿ ಕಾಲಿಗ್ ಮಾಡೋ ಪೂಜೆಯಿಂದ ಅವರ ಆಯಾಸಾ ಕಮ್ಮಿಯಾಗ್ತದೆ. ತಲೆ ಸ್ವರ್ಗದಾಗಿದ್ರೆ ಅವರು ಅಲ್ಲಿ ಪಡೋ ಸುಖ ನಮಗೂ ಒಂಚೂರು ಸಿಗ್ತದೆ, ತಿಳ್ಕೋ. ಸಮಾಧೀನೇ ಕಿತ್ಕೊಂಡೋದ್ರೆ ಆ ಸತ್ತೋಗಿರೋ ಜೀವ ಎಲ್ ಹೋಗ್ಬೇಕು ಪಾಪ? ಆಗ ಕಾಲ್ಗಳು ಅಂತರಾಳ್ದಾಗೆ ತೇಲಾಡ್ತಿರ್ತವೆ ಗೊತ್ತಾ? ಇದೆಲ್ಲಾ ಪ್ಯಾಟೇನಾಕಿರೋ ನಿಂಗೆಲ್ಲಿ ಗೊತ್ತಾಗ್ಬೇಕು? ನಿಮ್ಮಪ್ಪನ್ನ ಹಂಗಾಗಾಕೆ ನಾ ಬಿಡಾಕಿಲ್ಲಾ. ನಿಂತಾವಾಗಾಕಿಲ್ಲಾ ಅಂದ್ರೆ ಹೇಳು ನಾನೇ ಹೊತ್ಕೊಂಡು ಬಂದ್ ಇಡ್ತೀವ್ನಿ..." ಎನ್ನುತ್ತಾ ಸೊಂಟಕ್ಕೆ ಸೆರಗು ಸಿಕ್ಕಿಸಿ ಹೊರಡಲು ಅನುವಾದಳು.

ಅಮ್ಮನ ಹಟ ಬಲ್ಲ ಶಿವು, 'ಸರಿ ಬಿಡು. ನಾನೇ ತಂದಿಡ್ತೀವ್ನಿ. ಸದ್ಯಕ್ಕೆ ಎಲ್ಲೂ ಅಲ್ಲಾಡ್ದಾಂಗೆ ಭದ್ರಾ ಮಾಡಿಡ್ತೀವ್ನಿ. ನಾಳೆ ಬೆಳಿಗ್ಗೆ ಗಾರೆಯವ್ನಾ ಕರ್ಸಿ ಮೊದಲನ್‌ಥರಾನೇ ಬಂದೋಬಸ್ತಾಗಿ ಮಾಡಸದ್ರಾಯ್ತು, ಬಿಡು' ಎನ್ನುತ್ತಾ ಟಾರ್ಚು ಹಿಡಿದು ಹೊರಟ.

ಮತ್ತೆ ಮಳೆ ಜಿನುಗತೊಡಗಿತು. ಕೊಚ್ಚಿ ಹೋದ ಸಮಾಧಿ ಕಟ್ಟೆಯ ಗ್ರಾನೈಟು, ಇಟ್ಟಿಗೆಗಳೆಲ್ಲಾ ಬೇರೆಬೇರೆಯಾಗಿದ್ದವು. ಅವನ್ನೆಲ್ಲಾ ತಂದು ಕೂಡಿಸಿ ಮರುಸ್ಥಾಪಿಸುವಷ್ಟರಲ್ಲಿ ಒಂದು ತಾಸಿನ ಮೇಲಾಯಿತು. ಸಮಾಧಿ ಬಗ್ಗಿನ ಅಮ್ಮನ ವಿಚಿತ್ರ ನಂಬಿಕೆ ಅರಗಿಸಿಕೊಳ್ಳಲಾಗಲಿಲ್ಲ. ಶಿವುವಿಗೆ ಅಪ್ಪನನ್ನು ನೋಡಿದ ನೆನಪಿಲ್ಲ. ಏನೋ ಅಸ್ಪಷ್ಟ ಮುಖಗಳು ಮನಸ್ಸಿಗೆ ತೋರತೊಡಗಿದವು. ನಡುನಡುವೆ, ಜೆಸಿಬಿ ತೆಗೆದುಕೊಂಡು ಈ ಹಿಂದೆ ಮಾಡಿದ ಸಮಾಧಿ ಕಾರ್ಯಾಚರಣೆಗಳು ಮತ್ತೆ ಮತ್ತೆ ನೆನಪಾಗತೊಡಗಿದವು. ಮನಸ್ಸಿಗೆ ಏನೋ ಒಂಥರಾ ಕಸಿವಿಸಿ, ವಿಲಕ್ಷಣ ಭಾವನೆ ಅವನನ್ನು ಕಾಡತೊಡಗಿತು. 'ಆ ಸತ್ತೋಗಿರೋ ಜೀವ ಎಲ್ಲಿಗೆ ಹೋಯ್ತದೆ' ಎನ್ನುವ ಅಮ್ಮನ ಮಾತಿಗೆ ನಗಬೇಕೋ, ಮರುಗಬೇಕೋ ಗೊತ್ತಾಗಲಿಲ್ಲ. ಮಳೆಯಲ್ಲೇ ನೆನೆಯುತ್ತಾ, ಮೈಕೈಯ್ಯನ್ನೆಲ್ಲಾ ರಾಡಿ ಮಾಡಿಕೊಂಡು ಕೆಲಸ ಮುಗಿಸಿದ ಶಿವು. ಸರಿಯಾಗಿದೆಯೋ ಎಂದು ನೋಡಿದ. ಜೋಡಿಸಿಟ್ಟ ಸಮಾಧಿ ಯಾಕೋ ಒಂದುಕಡೆ ವಾರೆಯೆಂದೆನಿಸಿತು. ಮತ್ತೆ ಹೋಗಿ ಸರಿ ಮಾಡಿದ. ಹೀಗೇ ಎರಡು ಮೂರು ಬಾರಿ ಸರಿಪಡಿಸಿದಮೇಲೆ ಸಮಾಧಾನವಾಯ್ತು. ಕೆಲಸ ಮುಗಿದಮೇಲೂ ಮನಸ್ಸಿಗೆ ಒಂಥರಾ ಅಹಿತವೇ ಅನ್ನಿಸುತ್ತಿತ್ತು.

ಮನೆಗೆ ಬಂದು ಸ್ನಾನ ಮಾಡಿ ಊಟಕ್ಕೆ ಕೂರಬೇಕು ಅನ್ನುವಷ್ಟರಲ್ಲಿ, ಆಫೀಸಿನ ಸಹೋದ್ಯೋಗಿ ಪರಮೇಶನ ಫೋನ್ ಬಂತು.

"ಏನ್ ಗುರು. ಸಂಜೆ ಆರ್ ಗಂಟೆಯಿಂದ ಟ್ರೈ ಮಾಡ್ತಾನೇ ಇದೀನಿ. ನಿನ್ ಫೋನು ನಾಟ್ ರೀಚೆಬಲ್ ಬರ್ತಾ ಇದೆ."

"ಓ ಹೌದಾ? ಊರಿಗೆ ಬಂದೀದೀನಲ್ಲ, ಇಲ್ಲಿ ಸಿಗ್ನಲ್ ಸಿಗೋದೇ ಕಷ್ಟಾ. ಮಳೆ ಬೇರೆ ಬಂದಿತ್ತು. ಏನ್ ಸಮಾಚಾರಾ?"

"ಒಂದ್ ಬ್ಯಾಡ್ ನ್ಯೂಸ್ ಗುರೂ ನಿಂಗೆ. ಜೇಕೆ ಸರ್‌ದು ಅದೇನೋ ಕೋರಿಯರ್ ಕೊಟ್ಟು ಬಂದ್ಯಂತಲ್ಲಾ... ಕೊಡಬೇಕಾದದ್ದು ಬಿಟ್ಟು ಯಾವುದೋ ಬೇರೆ ಡಾಕುಮೆಂಟ್ ಕೊಟ್ಟಿದ್ದೀಯಂತೆ. ಅದರಲ್ಲಿ ಅಂಥದ್ದೇನಿತ್ತೋ ಏನೋ. ಸಾಯಂಕಾಲ ಮನೆಗೆ ಹೋಗೋಕ್‌ಮುಂಚೆ ಜೇಕೆ ಸರ್‌ಗೆ ಅದು ಗೊತ್ತಾಗಿ ಸಿಕ್ಕಾಪಟ್ಟೆ ಎಗರಾಡಿ ಬಿಟ್ರು. ನಿನಗೆ ಬಾಯಿಗೆ ಬಂದಾಗೆಲ್ಲಾ ಬೈದ್ರು ಗುರೂ, ಪ್ರಿಂಟ್ ಆಗಿರೋ ಪೇಪರ್ಸ್ ಎಲ್ಲಾ ಒಂದೇ ಅಂದ್ಕೊಂಡಿದಾನೆ ರಾಸ್ಕಲ್... ಅಂತಿದ್ರು. ಆಮೇಲೆ ಎಚ್‌ಆರ್